ದಿನಾಂಕಃ 09-03-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ನಂ.2 ಪರ ವಕೀಲರಾದ ಶ್ರೀ. ಕೆ.ಎಂ.ಪಿ ಇವರಿಂದ.**

ಸ್ವಾಧೀನಪಡಿಸಿಕೊಂಡ ಜಮೀನು ಒಣಬೇಸಾಯದ ಜಮೀನು ಇರುತ್ತದೆ. ನಮ್ಮ ಜಮೀನಿನಲ್ಲಿ ಈಗ ಕಾಲುವೆಯಾಗಿದೆ ಎನ್ನುವುದು ನಿಜ. ಕಾಲುವೆಯಾದ ನಂತರ ನನ್ನ ಜಮೀನು ನೀರಾವರಿ ಜಮೀನು ಎನ್ನುವುದು ನಿಜ. ಸದರಿ ಜಮೀನು ಇಂದಿಗೂ ಸಹ ಬಿನ್ ಶೇತ್ಕಿ ಅಂತಾ ಪರಿವರ್ತನೆಯಾಗಿಲ್ಲ ಹಾಗೂ ನನ್ನ ಜಮೀನಿಗೆ ಹತ್ತಿಕೊಂಡು ಯಾವುದೇ ಜಮೀನು ಬಿನ್ ಶೆತ್ಕಿ ಅಲ್ಲ ಎನ್ನುವುದು ನಿಜ. ನನ್ನ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಹತ್ತಿಕೊಂಡಿಲ್ಲ ಎನ್ನುವುದು ನಿಜ ಆದರೆ ಸಮೀಪದಲ್ಲಿದೆ. ನಮ್ಮ ಜಮೀನಿನ ಸುತ್ತ-ಮುತ್ತ ಶಾಲಾ ಕಾಲೇಜುಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಬಾಗಲಕೋಟೆಯಿಂದ ನನ್ನ ಜಮೀನು 20 ಕಿ.ಮೀ ದೂರದಲ್ಲಿದೆ ಎನ್ನುವುದು ಸರಿಯಲ್ಲ, 12 ರಿಂದ 13 ಕಿ.ಮೀ ದೂರದಲ್ಲಿದೆ.

ನನ್ನ ಜಮೀನಿನ ಸುತ್ತ-ಮುತ್ತ ಯಾವುದೇ ಕಾರ್ಖಾನೆಗಳು ಇಲ್ಲ ಎನ್ನುವುದು ನಿಜ. ನನ್ನ ಜಮೀನಿನಲ್ಲಿ ವರ್ಷಕ್ಕೆ ಒಂದೇ ಬೆಳೆ ಬೆಳೆಯುತ್ತೇನೆ ಎನ್ನುವುದು ಸರಿಯಲ್ಲ, 2 ಬೆಳೆ ಬೆಳೆಯುತ್ತೇನೆ. ನನ್ನ ಜಮೀನಿಗೆ ಪ್ರತಿ ಎಕರೆಗೆ 60 ಲಕ್ಷ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿದ ಖರೀದಿ ಪತ್ರದಲ್ಲಿಯ ಜಮೀನು ಹಾಗೂ ಸ್ವಾಧೀನಪಡಿಸಿಕೊಂಡ ಜಮೀನು 7-8 ಕಿ.ಮೀ ಅಂತರದಲ್ಲಿವೆ ಎನ್ನುವುದು ಸರಿಯಲ್ಲ, ಸಮೀಪದಲ್ಲಿವೆ. ಸದರಿ ಜಮೀನುಗಳ ಗುಣಧರ್ಮ ಬೇರೆ ಬೇರೆ ಇವೆ ಎನ್ನುವುದು ಸರಿಯಲ್ಲ. ಸದರಿ ಖರೀದಿ ಪತ್ರಗಳು ಗುಂಟಾ ಪ್ಲಾಟಗಳ ಜಮೀನಿನ ಖರೀದಿ ಪತ್ರಗಳು ಎನ್ನುವುದು ನಿಜ. ಆದ್ದರಿಂದ ಸದರಿ ಖರೀದಿ ಪತ್ರಗಳು ನನ್ನ ಜಮೀನಿಗೆ ಅನ್ವಯವಾಗುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ಜಮೀನು ಬಿನ್ ಶೇತ್ಕಿ ಆಗಲು ಯೋಗ್ಯವಾದ ಜಮೀನು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ಎಸ ಎಲ ಎ ಒ ನಮ್ಮ ಜಮೀನಿಗೆ ಭೇಟಿ ನೀಡಿದ್ದರು ಎನ್ನುವುದು ನಿಜ. ಅವರು ದಾಖಲೆಗಳನ್ನು ಪರಿಶೀಲಿಸಿದ ಶಿರೂರ ಗ್ರಾಮದ ದಾಖಲೆಗಳನ್ನು ಪರಿಗಣಿಸಿ ಯೋಗ್ಯ ಪರಿಹಾರ ನೀಡಿದ್ದಾರೆ ಎನ್ನುವುದು ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಎದುರುದಾರ ನಂ.1,3 ಪರ ವಕೀಲರಾದ ಶ್ರೀ. ಬಿ.ಪಿ.ಟಿ ಇವರಿಂದ.</u>**

ಮೇಲಿನ ಪಾಟೀ ಸವಾಲನ್ನು ಅನುಸರಿಸುತ್ತಾರೆ.

**<u>ಮರುವಿಚಾರಣೆ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

09-03-2026

2 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು ಹಾಗೂ
ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ನಿರ್ಮಾಣ
ಪ್ರಾಧಿಕಾರ, ಬಾಗಲಕೋಟೆ.